## ಅಳಿವಿನಂಚಿನಲ್ಲಿರುವ ಬಿದಿರಿನ ಕಣಜ

ವೇಗವಾಗಿ ಬೆಳೆಯುವ ಬಹೂಪಯೋಗಿ ಸಸ್ಯ ಜಾತಿಗೆ ಸೇರಿದ ಬಿದಿರು ಕೂಡ ಬದುಕುಳಿಯಲು ಅನೇಕ ಸವಾಲುಗಳನ್ನು ಎದುರಿಸಬೇಕಾದ ಪರಿಸ್ಥಿತಿ ಉಂಟಾಗಿದೆ. ಕಾಡ್ಗಿಚ್ಚು, ಭೂ ಕುಸಿತ ಇವೇ ಮುಂತಾದ ಪ್ರಕೃತಿ ವಿಕೋಪಗಳೊಂದಿಗೆ, ಮಾನವನ ದುರಾಸೆಯಿಂದಾಗಿ ಬಿದಿರು ನಾಶವಾಗುತ್ತಿರುವುದು ವಿಪರ್ಯಾಸ. ಹಿಂದೆ ಭತ್ತವನ್ನು, ಇತರ ಧಾನ್ಯಗಳನ್ನು ಗೋಣಿಚೀಲಗಳಲ್ಲಿ ತುಂಬಿ, ಇಲ್ಲವೇ ಹಾಗೆಯೇ ಬಿದಿರಿನ ಕಣಜಗಳಲ್ಲಿ ತುಂಬಿಡುತ್ತಿದ್ದರು. ಮಲೆನಾಡಿನಲ್ಲಿ ಮುಖ್ಯವಾಗಿ ಅಡಿಕೆ ಒಣಗಿಸಲು ಬಿದಿರಿನ ತಡಿಕೆಗಳನ್ನು ಬಳಸಲಾಗುತ್ತಿತ್ತು. ಅಡಿಕೆ ತುಂಬಿಡಲು ಬಿದಿರು ಅಥವಾ ಬೆತ್ತದ ಬುಟ್ಟಿಗಳನ್ನು ಬಳಸಲಾಗುತ್ತಿತ್ತು. ಆದರೀಗ ಅವುಗಳ ಸ್ಥಾನವನ್ನು ಪ್ಲಾಸ್ಟಿಕ್ ನಾರುಗಳು ಆಕ್ರಮಿಸಿವೆ. ಬೇಕೆಂದರೂ ಸಿಕ್ಕದ ಬಿದಿರಿನ ಕಣಜ, ತಡಿಕೆಗಳು ಅಳಿವಿನಂಚಿನಲ್ಲಿವೆ.

–ಎಸ್.ಎನ್. ಚಂದ್ರಕಲಾ, ಕೊಪ್ಪ





## ರಥದಲ್ಲಿ ಮಹನೀಯರು

ಚಿತ್ರದುರ್ಗ ಜಿಲ್ಲೆಯ ಬೆಲಗೂರು ಗ್ರಾಮದಲ್ಲಿರುವ ಆಂಜನೇಯ ದೇವಸ್ಥಾನಕ್ಕೆ ಈಚೆಗೆ ಭೇಟಿ ನೀಡಿದ್ದೆ. ತುಂಬಾ ಪ್ರಸಿದ್ಧ ದೇವಾಲಯ. ದೇವರಿಗೆಂದು ತಯಾರಿಸಿ ಅರ್ಪಿಸಲಾದ ರಥ ಅದ್ಭುತವಾಗಿ ಮೂಡಿಬಂದಿದೆ. ರಥವನ್ನು ಕೆತ್ತಿರುವ ಶಿಲ್ಪಿ ಅಭಿನಂದನಾರ್ಹರು. ರಥದ ಮಧ್ಯಭಾಗದಲ್ಲಿ ಭಾರತದ ಪ್ರಸಿದ್ಧ ಮಹನೀಯರ ಚಿತ್ರಗಳನ್ನು ಕೆತ್ತಿರುವುದು ಚೆನ್ನಾಗಿದೆ. ಕವಿಗಳು, ರಾಜಕಾರಣಿಗಳು, ಸಾಹಿತಿಗಳು, ಚಿತ್ರರಂಗದ ಖ್ಯಾತ ನಟರು, ಸ್ವಾತಂತ್ರ್ಯ ಹೋರಾಟಗಾರರು ಇತ್ಯಾದಿ. ಈ ಚಿತ್ರಕಲೆ ಭಾರತದ ಚರಿತ್ರೆಯನ್ನು ಪರಿಚಯಿಸುತ್ತದೆ.

–ಶ್ರೀಕಾಂತೇಶ್ವರ ಎಸ್., ಬೆಂಗಳೂರು

## ಶತಮಾನ ಕಂಡ ನಾಮದ ಪೆಟ್ಟಿಗೆ

ಇಲ್ಲಿ ಕಾಣಿಸುತ್ತಿರುವ ನಾಮದ ಪೆಟ್ಟಿಗೆ, ಅರಿಶಿನ ಕುಂಕುಮದ ಭರಣಿಗಳು, ಪುಸ್ತಕದ ಪೀಠ ಹಾಗೂ ಬೆತ್ತದ ಬುಟ್ಟಿ ಸುಮಾರು ಒಂದು ಶತಮಾನದಷ್ಟು ಹಳೆಯದು. ಕನ್ನಡಿ ಸಹಿತವಾಗಿ, ನಾಮವನ್ನು ಧರಿಸಲು ಬೇಕಾದ ಎಲ್ಲಾ ವಸ್ತುಗಳನ್ನು ಈ ನಾಮದ ಪೆಟ್ಟಿಗೆಯಲ್ಲಿ ವ್ಯವಸ್ಥಿತವಾಗಿ ಜೋಡಿಸಲಾಗಿದೆ. ಅರಿಶಿನ ಕುಂಕುಮದ ಭರಣಿಗಳು, ಪುಸ್ತಕದ ಪೀಠ, ಬೆತ್ತದ ಬುಟ್ಟಿ ಇತ್ಯಾದಿ ವಸ್ತುಗಳು ನಮ್ಮನ್ನು ದಶಕಗಳ ಹಿಂದಕ್ಕೆ ಕರೆದುಕೊಂಡು ಹೋಗುತ್ತವೆ.

ಇವು ನಮ್ಮ ಮಾವನವರ ತಂದೆಯವರಾಗಿದ್ದ ದಿ. ಶೇಷಾದ್ರಿ ಕೇಶವ ಅಯ್ಯಂಗಾರ್ ಮತ್ತು ಅವರ ಪೂರ್ವಜರು ಬಳಸುತ್ತಿದ್ದ ವಸ್ತುಗಳು ಎನ್ನಲಾಗಿದೆ. ಇವುಗಳನ್ನು ಕಾಪಾಡಿಕೊಂಡು ಬಂದಿದ್ದ ನಮ್ಮ ಅತ್ತೆ ಮಾವ ಇಂದು ಬದುಕಿಲ್ಲದಿದ್ದರೂ, ಅವರು ಜೋಪಾನ ಮಾಡಿದ್ದ ಈ ವಸ್ತುಗಳಲ್ಲಿ ನಮ್ಮ ಹಿರಿಯರನ್ನು ನಾವು ಕಂಡು ಪುನೀತರಾಗುತ್ತೇವೆ.

ಆಶಾ ಅಪ್ರಮೇಯ, ದಾವಣಗೆರೆ



